**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1215/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ.ಮಾನಸ | ಪ್ರಾಸಾ-1 |
| ತಂದೆಯ ಹೆಸರು | : ಹೆಚ್.ಎ. ವೆಂಕಪ್ಪ | ಚಾಸಾ-6 |
| ವಯಸ್ಸು | : 43 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವೈಧ್ಯಾಧಿಕಾರಿಗಳು | ದಿನಾಂಕಃ 29.07.2025. |
| ವಾಸಸ್ಥಳ | : ಮೂಡಿಗೆರೆ ಸರ್ಕಾರಿ ಆಸ್ಪತ್ರೆ | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.28.08.2020 ರಿಂದ ಇಲ್ಲಿಯವರೆಗೂ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ವೈಧ್ಯಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.16.12.2022 ರಂದು ಬೆ.11.00 ರ ಸಮಯಕ್ಕೆ ಚಾಸಾ-1 ರವರು ಆರೋಪಿ 1 ರಿಂದ 2 ರವರು ದಿ.16.12.2022 ರಂದು ಬೆ.10.30 ರ ಸಮಯಕ್ಕೆ, ಆರೋಪಿ ಮತ್ತು ಚಾಸಾ-1 ರವರ ಮಧ್ಯೆ ಗಲಾಟೆಯಾಗಿದ್ದು, ಸದರಿ ಸಮಯದಲ್ಲಿ 1 ಮತ್ತು 2 ನೇ ಆರೋಪಿಯವರು ಚಾಸಾ-1 ರವರಿಗೆ ಕತ್ತಿಯಿಂದ ಅವರ ಮೇಲೆ ಹಲ್ಲೆ ಮಾಡಿರುವ ಹಿನ್ನಲೆಯಲ್ಲಿ ಬೆ.11.00 ರ ಸಮಯಕ್ಕೆ ಚಾಸಾ-2 ರವರೊಟ್ಟಿಗೆ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆಂದು ಬಂದಿರುತ್ತಾರೆ.

ಅವರನ್ನು ಪರೀಕ್ಷಿಸಲಾಗಿ ಎಡಗೆನ್ನೆಯ ಮೇಲೆ ಊತದ ನೋವು ಕಂಡುಬಂದಿರುತ್ತದೆ ಮತ್ತು ಬಲಭಾಗದ ಮೊಣಕೈ ನಲ್ಲಿ 0.05 ಸೆಂಟೀಮೀಟರ್ ನ ತರಚಿದ ಗಾಯ ಮತ್ತು ಊತದ ಗಾಯವಾಗಿರುತ್ತದೆ, ಎಡಗೈ ಮೊಣಕೈನಲ್ಲಿ 3 ಸೆಂಟೀಮೀಟರ್ ಊತದ ನೋವು ಮತ್ತು ತರಚಿದ ಗಾಯವಾಗಿವುದು ಕಂಡುಬಂದಿರುತ್ತದೆ. ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ.

ದಿ.16.12.2022 ರಂದು ನೀಡಿದ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-1, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ದೊಣ್ಣೆ ಮತ್ತು ಕತ್ತಿಯಿಂದ ಹಲ್ಲೆ ಮಾಡಿದ್ದಲ್ಲಿ ನಾನು ಮೇಲೆ ತಿಳಿಸಿದ ಗಾಯಗಳು ಆಗುವ ಸಂಭವ ಇರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಕೆ.ಆರ್. ವಕೀಲರಿಂದಃ**

ಸಾಮಾನ್ಯವಾಗಿ ಗಟ್ಟಿಯಾದ ನೆಲದ ಮೇಲೆ ಬಿದ್ದಲ್ಲಿ ನಾನು ಮೇಲೆ ನಿಪಿ-1 ರಲ್ಲಿ ತಿಳಿಸಿರುವ ಗಾಯಗಳು ಆಗುವ ಸಂಭವವಿರುತ್ತದೆ ಎಂದರೆ ಸಾಕ್ಷಿಯು ಗಟ್ಟಿಯ ನೆಲದ ಮೇಲೆ ಬಿದ್ದಲ್ಲಿ ಸದರಿ ಗಾಯಗಳು ಆಗುವ ಸಂಭವವಿರುತ್ತದೆ ಆದರೆ ಹರಿತವಾದ ವಸ್ತುಗಳಿಂದ ಹೊಡೆತ ಬಿದ್ದಲ್ಲಿ ಮಾತ್ರ ಹರಿತವಾದ ಗಾಯಗಳು ಆಗುತ್ತವೆ. ಸಾಮಾನ್ಯವಾಗಿ ಕತ್ತಿಯಂತ ವಸ್ತುಗಳ ಮೇಲೆ ವ್ಯಕ್ತಿಯು ಬಿದ್ದಲ್ಲಿ ಸದರಿ ಗಾಯಗಳು ಆಗುವ ಸಂಭವವಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಪ್ರತ್ಯೇಕವಾಗಿ ಕತ್ತಿಯ ಹಿಡಿಯಿಂದ ಎಂದು ನನ್ನ ವರದಿಯಲ್ಲಿ

ನಮೂದಿಸಿರುತ್ತೇನೆ. ನಾವು ಗಾಯಗಳ ವಯಸ್ಸನ್ನು ತಿಳಿಸಬಲ್ಲೆವು ಆದರೆ ಊತದ ಕುರಿತು ನಾವು ವಯಸ್ಸನ್ನು ತಿಳಿಸಲಾಗುವುದಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಗಾಯವಾದ ಎರಡು ದಿನಗಳ ವರೆಗೂ ಚಿಕಿತ್ಸೆ ಪಡೆಯದಿದ್ದಲ್ಲಿ ಊತಗೊಳ್ಳುವ ಸಂಭವವಿರುತ್ತದೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1215/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಶ್ರೀ ತಿಪ್ಪೇಸ್ವಾಮಿ | ಪ್ರಾಸಾ-2 |
| ತಂದೆಯ ಹೆಸರು | : ಪೂಜಾರಿ ಎಲ್ಲಪ್ಪ | ಚಾಸಾ-5 |
| ವಯಸ್ಸು | : 62 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ನಿವೃತ್ತ ತಹಶೀಲ್ದಾರ್ | ದಿನಾಂಕಃ 29.07.2025. |
| ವಾಸಸ್ಥಳ | : ಚಿತ್ರದುರ್ಗ | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.02.02.2023 ರಿಂದ 27.01.2024 ರವರೆಗೂ ಮೂಡಿಗೆರೆಯಲ್ಲಿ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.16.01.2023 ರಂದು ಬಣಕಲ್ ಪೋಲಿಸ್ ಠಾಣೆಯಿಂದ ಬಕ್ಕೀ ಗ್ರಾಮದ ಸ.ನಂ.40 ಕ್ಕೆ ಸಂಬಂಧಿಸಿದ ಪಹಣಿಯನ್ನು ಕುರಿತು ಮನವಿಯನ್ನು ಸಲ್ಲಿಸಿರುತ್ತಾರೆ. ದಿ.04.02.2023 ರಂದು ಸದರಿ ಮನವಿಯ ಮೇರೆಗೆ ನಾನು ಬಕ್ಕೀ ಗ್ರಾಮದ ಸ.ನಂ.40 ಕ್ಕೆ ಪಹಣಿಯನ್ನು ಅವರಿಗೆ ನೀಡಿರುತ್ತೇನೆ.

ದಿ.04.02.2023 ರಂದು ಬಣಕಲ್ ಪೋಲಿಸ್ ಉಪ-ನಿರೀಕ್ಷಕರಿಗೆ ನೀಡಿದ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-2, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-2(ಎ) ಎಂದು ಗುರುತಿಸಲಾಯಿತು ಸದರಿ ವರದಿಯೊಟ್ಟಿಗೆ ನೀಡಿದಂತಹ ಬಕ್ಕೀ ಗ್ರಾಮದ ಸ.ನಂ.40 ರ ಆನ್ ಲೈನ್ ಪ್ರತಿಯನ್ನು ಸಾಕ್ಷಿಯು ನೋಡಿ ಗುರುಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಕೆ.ಆರ್. ವಕೀಲರಿಂದಃ**

ಸಾಮಾನ್ಯವಾಗಿ ನಮ್ಮ ಇಲಾಖೆಯಿಂದ ನೀಡಿದ ಪಹಣಿಗೆ ಅದರಲ್ಲಿ ಬಾರ್ ಕೋಡ್ ಬರುತ್ತದೆ ಎಂದರೆ ಸರಿ. ಆದರೆ ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವ ಪಹಣಿಯಲ್ಲಿ ಸದರಿ ಬಾರ್ ಕೋಡ್ ಕಂಡು ಬರುತ್ತಿಲ್ಲ ಎಂದರೆ ಸರಿ. ಪೋಲಿಸರಿಗೆ ಸಹಾಯ ಮಾಡುವ ಉದ್ದೇಶದಿಂದ ಸದರಿ ಪಹಣಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1215/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಬಿಳಿಯಪ್ಪ | ಪ್ರಾಸಾ-3 |
| ತಂದೆಯ ಹೆಸರು | : ಲೇಟ್ ಮಂಜಯ್ಯ | ಚಾಸಾ-4 |
| ವಯಸ್ಸು | : 61 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ .07.2025 |
| ವಾಸಸ್ಥಳ | : ಬಕ್ಕಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಅವರು ನಮ್ಮ ಪಕ್ಕದ ಮನೆಯವರು. ಚಾಸಾ-1 ರಿಂದ ಚಾಸಾ-3 ರವರ ಪರಿಚಯ ನನಗಿದೆ.

ಸಾಕ್ಷಿಯು ದಿ.03.01.2023 ರಂದು ಬರೆದ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-3, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ಮತ್ತು 5 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಕತ್ತಿ ಮತ್ತು ದೊಣ್ಣೆಯನ್ನು ನೋಡಿ ಕೃತ್ಯಕ್ಕೆ ಬಳಸಿದ ವಸ್ತುಗಳು ಎಂದು ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ದೊಣ್ಣೆಯನ್ನು ಎಂ.ಒ.1 ಮತ್ತು ಕತ್ತಿಯನ್ನು ಎಂ.ಒ.2 ಎಂದು ಗುರುತಿಸಲಾಯಿತು.

ಕಳೆದ 2 ವರ್ಷಗಳ ಹಿಂದೆ ಬಕ್ಕೀ ಗ್ರಾಮದ ಕಾಲುದಾರಿಯಲ್ಲಿ ನಿಪಿ-3 ಕ್ಕೆ ಸಹಿ ಮಾಡಿರುತ್ತೇನೆ. ಚಾಸಾ-1 ಮತ್ತು 2 ರವರೊಟ್ಟಿಗೆ ಒಳ್ಳೆ ಬಾಂಧವ್ಯ ಇದ್ದ ಕಾರಣ, ಅವರ ಮಾತಿನ ಮೇರೆಗೆ ನಾನು ನಿಪಿ-3 ಕ್ಕೆ ಸಹಿಯನ್ನು ಮಾಡಿರುತ್ತೇನೆ. ನಿಪಿ-3 ರಲ್ಲಿ ಏನನ್ನು ಬರೆಯಲಾಗಿದೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ ಮತ್ತು ಪೋಲಿಸರು ನನಗೆ ಓದಿ ತಿಳಿದಿರುವುದಿಲ್ಲ. ಸದರಿ ಸಮಯದಲ್ಲಿ ಚಾಸಾ-1 ರಿಂದ 3 ಹಾಗೂ ಇಂದ್ರೇಶ್ ಎಂಬುವವರ ಸ್ಥಳದಲ್ಲಿ ಹಾಜರಿದ್ದರು. ಸದರಿ ಸಮಯದಲ್ಲಿ ಪೋಲಿಸರು ಎಂ.ಒ.1 ಮತ್ತು 2 ನ್ನು ವಶಪಡಿಸಿಕೊಂಡಿರುತ್ತಾರೆ. ಇದನ್ನು ಹೊರತುಪಡಿಸಿ ಇನ್ಯಾವುದೇ ವಿಷಯ ನನಗೆ ತಿಳಿದಿರುವುದಿಲ್ಲ. ನಾನು ನಿಪಿ-3 ಕ್ಕೆ ಸಹಿ ಮಾಡುವಾಗ 12.00 ರ ಸಮಯವಾಗಿತ್ತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.03.01.2023 ರಂದು ಬೆ.11.00 ರಿಂದ 12.00 ರ ಸಮಯದಲ್ಲಿ ಬಕ್ಕೀ ಗ್ರಾಮದ ಸ.ನಂ.40 ರಲ್ಲಿ ಕಾಫೀ ತೋಟದಲ್ಲಿ ಹಾದುಹೋಗಿರುವ ರಸ್ತೆಯಲ್ಲಿ ನಿಪಿ-3 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. 1 ಮತ್ತು 2 ನೇ ಆರೋಪಿಗಳು ಮತ್ತು ಚಾಸಾ-1 ಮತ್ತು 2 ರವರ ನಡುವೆ ಜಗಳವಾದ ಬಾಬ್ತು ಚಾಸಾ-1 ರವರು ದೂರ ನೀಡಿರುವ ವಿಚಾರ ನನಗೆ ತಿಳಿದಿರುತ್ತದೆ ಎಂದರೆ

ಸರಿಯಲ್ಲ. ಸದರಿ ದೂರಿನ ಬಾಬ್ತು ಪೋಲಿಸರು ಸ್ಥಳ ಮಹಜರ್ ಗೆಂದು ಬಂದಿದ್ದರು, ಚಾಸಾ-1 ರವರು ಘಟನಾ ಸ್ಥಳವನ್ನು ಪೋಲಿಸರು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಚಾಸಾ-1 ರವರು ಎಂ.ಒ.1 ಮತ್ತು 2 ನ್ನು ತೋರಿಸಿ ಆರೋಪಿಗಳು ಸದರಿ ವಸ್ತುಗಳಿಂದ ಅವರಿಗೆ ಹಲ್ಲೆ ಮಾಡಿರುವ ಕುರಿತು ಪೋಲಿಸರಿಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಾಹಿತಿಯ ಮೇರೆಗೆ ನನ್ನ ಸಮಕ್ಷಮ ಪೋಲಿಸರು ನಿಪಿ-3 ರಂತೆ ಮಹಜರ್ ಕ್ರಮವನ್ನು ಬರೆಯಲಾಗಿದ್ದು, ಎಂ.ಒ.1 ಮತ್ತು 2 ನ್ನು ವಶಪಡಿಸಿಕೊಂಡು ಮತ್ತು ಸದರಿ ಸಮಯದಲ್ಲಿ ನಿಪಿ-4 ಮತ್ತು 5 ರಂತೆ ಫೋಟೋ ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಜೊತೆ ಚಾಸಾ-3 ರವರು ಸದರಿ ಸಮಯದಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಹೆಚ್.ಕೆ.ಆರ್ ವಕೀಲರಿಂದಃ**

ಎಂ.ಒ.1 ಮತ್ತು 2 ನ್ನು ಪೋಲಿಸರು ಎಲ್ಲಿಂದ ತಂದಿದ್ದರು ಎಂದು ನನಗೆ ತಿಳಿದಿರುವುದಿಲ್ಲ. ನಿಪಿ-3 ಕ್ಕೆ ಯಾವ ವಿಷಯದ ಕುರಿತು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.